PW- 10

CW-15

ದಿನಾಂಕ**: 23.07.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು**.**

ಪಾಟೀ ಸವಾಲುಃ ಶ್ರೀ ಎಸ್ ಆರ್ ಹೆಚ್ ಆರೋಪಿ ಪರ ವಕೀಲರಿಂದಃ

1. ನನ್ನ ತಂಗಿ ಮೃತ ಶಾಂತಾಬಾಯಿ ಇವಳಿಗೆ 4 ಜನ ಗಂಡು ಮಕ್ಕಳು. 4 ಜನ ಗಂಡು ಮಕ್ಕಳ ಮದುವೆಯಾದ ಮೇಲೆ ಅವರ ಹೆಂಡತಿಯರಿಗೂ ಹಾಗೂ ಮೃತ ಶಾಂತಾಬಾಯಿಗೂ ಸ್ವಲ್ಪ ಮನಸ್ತಾಪ ಇತ್ತು ಎಂದರೆ ಸಾಕ್ಷಿಯು ಒಂದೊಂದು ಬಾರಿ ಒಬ್ಬೊಬ್ಬ ಮಕ್ಕಳ ಬಳಿ ಹೋಗುತ್ತಿದ್ದರು ಎಂದು ಹೇಳುತ್ತಾರೆ. ಅವರ ಮದ್ಯೆ ಮನಸ್ತಾಪ ಇದ್ದ ಕಾರಣ ಮೃತ ಶಾಂತಾಬಾಯಿ ಪ್ರತ್ಯೆಕವಾಗಿ ವಾಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಒಂದೊಂದು ಬಾರಿ ಒಬ್ಬೊಬ್ಬರ ಮನೆಗೆ ಹೋಗುತ್ತಿದ್ದಳು ಎಂದು ನುಡಿಯುತ್ತಾರೆ.

2. ನನಗೆ ಮೃತ ಶಾಂತಾಬಾಯಿ ತೀರಿಕೊಂಡ ವಿಷಯವನ್ನು ಪ್ರಾಸಾ-3 ಮದುಕೇಶ್ವರ ಮಾಳವದೆ ದೂರವಾಣಿಯ ಮೂಲಕ ತಿಳಿಸಿದ್ದು, ಸದರಿಯವರು ಮೃತ ಶಾಂತಾಬಾಯಿ ತೀರಿಕೊಂಡಿರುತ್ತಾರೆಂದು ಮಾತ್ರ ಹೇಳಿರುತ್ತಾರೆ. ಮೃತ ಶಾಂತಾಬಾಯಿ ಹೇಗೆ ತೀರಿಕೊಂಡಿದ್ದಾರೆಂದು ನನಗೆ ದೂರವಾಣಿಯಲ್ಲಿ ಪ್ರಾಸಾ-3 ಮದುಕೇಶ್ವರ ರವರು ಹೇಳಿರುವುದಿಲ್ಲ.

3. ಪೋಲಿಸರು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ನನ್ನನ್ನು ವಿಚಾರಿಸಿಲ್ಲ. ನಾನು ಪೋಲಿಸರ ಮುಂದೆ "ಪ್ರಾಸಾ-3 ಮದುಕೇಶ್ವರ ನನಗೆ ದೂರವಾಣಿ ಕರೆ ಮಾಡಿ ಮೃತ ಶಾಂತಾಬಾಯಿ ಹೃದಯಾಘಾತದಿಂದ ತೀರಿಕೊಂಡಿರುತ್ತಾಳೆಂದು ಹೇಳಿದ್ದನು" ಎಂದು ಹೇಳಿರುವುದಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು.

4. ನನಗೆ ಮೃತ ಶಾಂತಾಬಾಯಿ ಹಾಗೂ ಅವರ ಮಕ್ಕಳು ಏಕೆ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದರು ಎಂದು ಹೇಳಲು ಆಗುವುದಿಲ್ಲ. ನನಗೆ ನನ್ನ ತಂಗಿ ಮೃತ ಶಾಂತಾಬಾಯಿ ಹತ್ತಿರ ಎಷ್ಟು ಬಂಗಾರ ಇತ್ತು ಮತ್ತು ಏನೆಲ್ಲಾ ಆಸ್ತಿ ಇದ್ದವು ಎಂದು ಹೇಳಲು ಆಗುವುದಿಲ್ಲ. ನನ್ನ ತಂಗಿ ಮೃತ ಶಾಂತಾಬಾಯಿ ದಿನನಿತ್ಯ ಕೈಯಲ್ಲಿ ಒಂದು ಬಳೆ , ಕೊರಳಿಗೆ ಒಂದು ಚೈನು ಹಾಕುತ್ತಿದ್ದಳು.

5. ನಾನು ಆಗಾಗ ಮೃತ ಶಾಂತಾಬಾಯಿ ಅವರ ಮನೆಗೆ ವರ್ಷದಲ್ಲಿ ಒಂದು ಬಾರಿ ಬಂದು ಹೋಗುತ್ತಿದ್ದೆ. ಅವಳು ಸಹ ನಮ್ಮಮನೆಗೆ ಕಾರ್ಯಕ್ರಮಗಳಿಗೆ ಬರುತ್ತಿದ್ದಳು. ಮೃತ ಶಾಂತಾಬಾಯಿ ತೀರಿಹೋಗುವ 4 – 5 ತಿಂಗಳ ಮೊದಲು ಅವರ ಮನೆಗೆ ನಾನು ಹೋಗಿದ್ದೆ. ಅವಳು ಚೆನ್ನಾಗಿದ್ದಾಳೋ ? ಇಲ್ಲವೋ ಎಂದು ನೋಡಿಕೊಂಡು ಬರಲು ಹೋಗಿದ್ದೆ.

6. ನಾವು ಮೃತ ಶಾಂತಾಬಾಯಿಯನ್ನು ನೋಡಲು ಬೆಳಿಗ್ಗೆ 11.00 ಗಂಟೆಗೆ ಹೋಗಿರುತ್ತೇವೆ. ನಾನು , ಪ್ರಾಸಾ-12 ನನ್ನ ಮಗ ಅರವಿಂದ , ಪ್ರಾಸಾ-11 ವಿಜಯಲಕ್ಷ್ಮಿ, ನನ್ನ ತಮ್ಮ ಪ್ರಾಸಾ-9 ಮೃತ್ಯುಂಜಯ ಹಾಗೂ ಪ್ರಾಸಾ-2 ರಾಮನಾಥ ಚೌದರಿ ಬೆಳಿಗ್ಗೆ 11.00 ಗಂಟೆಗೆ ಹೋದೆವು.

7. ನಾನು ಮೃತ ಶಾಂತಾಬಾಯಿಯ ಮನೆಗೆ ಬಂದಾಗ ಪೋಲಿಸರು ಬಂದಿದ್ದರು ಮತ್ತು ಹೊರಗೆ ಬಹಳ ಜನ ಸೇರಿದ್ದರು. ನನಗೆ ಪೋಲಿಸ ಇಲಾಖೆಯ ವಿವಿಧ ಹುದ್ದೆಯ ಬಗ್ಗೆ ಅಷ್ಟೊಂದು ಮಾಹಿತಿ ಇಲ್ಲ. ನಾವು ಅಲ್ಲಿ 10 – 15 ಜನ ಪೋಲಿಸರು ಬಂದಿದ್ದು , ನಾವು ಮನೆಯ ಒಳಗೆ ಹೋದೆವು. ಶವವಿರುವ ಜಾಗಕ್ಕೆ ಪೋಲಿಸರು ಯಾರನ್ನು ಬಿಟ್ಟಿರಲಿಲ್ಲ. ಶವದ ಹತ್ತಿರ 4 ಜನ ಇದ್ದರು. ನನಗೆ ಮೃತ ಶಾಂತಾಬಾಯಿ ಶವ ನೋಡಿದಾಗ ಯಾರೋ ದುಶ್ಕರ್ಮಿ ಅವಳನ್ನು ಕೊಲೆ ಮಾಡಿರುತ್ತಾರೆ ಅಂತಾ ಅನಿಸಿತು.

8. ಮೃತ ಶಾಂತಾಬಾಯಿ 4 ಜನ ಗಂಡು ಮಕ್ಕಳಿಗೆ ನಾನು ಅವರ ತಾಯಿಯ ಕೊಲೆಯ ಬಗ್ಗೆ ಯಾವುದಾದರೂ ದೂರನ್ನು ಕೊಟ್ಟಿರುವಿರಾ ಎಂದು ಕೇಳಿದಾಗ ಅವರು ದೂರಿನ ಬಗ್ಗೆ ಯಾವುದೇ ಮಾತನ್ನು ಆಡಲಿಲ್ಲ. ಮೃತ ಶಾಂತಾಬಾಯಿಯ ಮಕ್ಕಳು ದೂರನ್ನು ಏಕೆ ಕೊಟ್ಟಿಲ್ಲ ಎಂದು ಅವರ ಬಗ್ಗೆ ನನಗೆ ಸಂಶಯ ಬಂದಿಲ್ಲ.

9. ಪೋಲಿಸರು ನನ್ನ ಸಮಕ್ಷಮ ಅಲ್ಲಿ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ನಾನು ಆ ದಿನ ಮೃತ ಶಾಂತಾಬಾಯಿ ಅವರ ಮನೆಯಲ್ಲಿ ಶವ ಸಾಗಿಸುವವರೆಗೂ ಇದ್ದೆ. ಮೃತ ಶಾಂತಾಬಾಯಿ ಶವವನ್ನು ಮರಣೊತ್ತರ ಪರೀಕ್ಷೆಗಾಗಿ ಮದ್ಯಾಹ್ನ 3.00 – 4.00 ಗಂಟೆಗೆ ತೆಗೆದುಕೊಂಡು ಹೋದರು. ನಾನು ಮೃತ ಶಾಂತಾಬಾಯಿ ಶವವನ್ನು ಮರಣೊತ್ತರ ಪರೀಕ್ಷೆಗೆ ತೆಗೆದುಕೊಂಡು ಹೋದಾಗ ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿ ನನ್ನನ್ನು ಯಾರು ವಿಚಾರಣೆಗೆ ಒಳಪಡಿಸಿಲ್ಲ.

10. ಆಸ್ಪತ್ರೆಯಿಂದ ನಾನು ಪೋಲಿಸ ಠಾಣೆಗೆ ನನ್ನ ತಮ್ಮ ದೂರು ಕೊಡುವ ಸಮಯದಲ್ಲಿ ಹೋಗಿದ್ದೆ. ಪೋಲಿಸ ಠಾಣೆಯಲ್ಲಿ ಪೋಲಿಸರು ನನ್ನನ್ನು ಸಾಕ್ಷಿ ಎಂದು ಸಹಿ ಮಾಡಿಸಿಕೊಂಡರು. ಕೊಲೆ ಮಾಡಿದವರು ಯಾರು ಎಂದು ಕಂಡು ಹಿಡಿಯಲು ನನ್ನನ್ನು ಸಾಕ್ಷಿ ಎಂದು ಪೋಲಿಸರು ಸಹಿ ಮಾಡಿಸಿಕೊಂಡರು. ನನಗೆ ಮೃತ ಶಾಂತಾಬಾಯಿಯನ್ನು ಯಾರು ಕೊಲೆ ಮಾಡಿರುತ್ತಾರೆ ಎಂದು ವೈಯಕ್ತಿಕ ಮಾಹಿತಿ ಇಲ್ಲ. ನನಗೆ ಪೋಲಿಸರು ಹೇಳಿದ ಮೇಲೆ ಆರೋಪಿ ಕೊಲೆ ಮಾಡಿರುತ್ತಾನೆಂದು ತಿಳಿದು ಬಂದಿತು.

11. ಪ್ರಾಸಾ-7 ಗೀತಾ ಹಾಗೂ ನಾನು ಮೃತ ಶಾಂತಾಬಾಯಿ ಕೊಲೆಯ ಬಗ್ಗೆ ಯಾವುದೇ ವಿಷಯವನ್ನು ಚರ್ಚಿಸಿಲ್ಲ. ನನ್ನ ತಂಗಿ ಮೃತ ಶಾಂತಾಬಾಯಿಯ ಎರಡು ಕೈಗಳನನು ಸೀರೆಯಿಂದ ಮಂಚಕ್ಕೆ ಕಟ್ಟಿ , ಕುತ್ತಿಗೆಯನ್ನು ಸೀರೆಯಿಂದ ಬಿಗಿದಿದ್ದು , ಕಣ್ಣಿಗೂ ಸಹ ಸೀರೆಯಿಂದ ಕಟ್ಟಲಾಗಿತ್ತು ಎಂದು ನನಗೆ ಪೋಲಿಸರು ಹೇಳಿದ್ದರಿಂದ ತಿಳಿದು ಬಂದಿತು ಎಂದರೆ ಸರಿ.

12. ಆರೋಪಿ ಮೃತ ಶಾಂತಾಬಾಯಿಗೆ ಸೇರಿದ ಬಂಗಾರವನ್ನು ಹುಬ್ಬಳ್ಳಿಯ ಉಣಕಲ್ ಕೆರೆಯ ಹತ್ತಿರ ಹೂತಿದ್ದನು. ಸದರಿ ವಿಷಯದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಎರಡು ದಿನಗಳ ನಂತರ ನನಗೆ ಸದರಿ ಗಾಳಿ ಸುದ್ದಿ ಗೊತ್ತಾಯಿತು. ನಾನು ಗಾಳಿ ಸುದ್ದಿ ವಿಷಯವನ್ನು ಪೋಲಿಸರಿಗೆ ತಿಳಿಸಿಲ್ಲ.

13. ಮೃತ ಶಾಂತಾಬಾಯಿ ಬಂಗಾರ ಪೋಲಿಸರಿಗೆ ಉಣಕಲ್ ಕೆರೆಯ ಹತ್ತಿರವೇ ಸಿಕ್ಕಿತು ಎಂದು ನಂತರ ತಿಳಿದು ಬಂದಿತು. ನನಗೆ ಸದರಿ ಬಂಗಾರವನ್ನು ಯಾರು ಪೋಲಿಸರಿಗೆ ತೋರಿಸಿದರು ಎಂದು ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ.

14. ಮೃತ ಶಾಂತಾಬಾಯಿಯ ಶವವನ್ನು ನೋಡಿದಾಗ ಅವಳ ಕೆನ್ನೆಯ ಮೇಲೆ ರಕ್ತ ಹತ್ತಿದ್ದು , ಬಾಯಿಯಿಂದಲೂ ಸ್ವಲ್ಪ ರಕ್ತ ಬಂದ ಹಾಗೆ ಇತ್ತು. ಮೃತ ಶಾಂತಾಬಾಯಿಯ ಕೆನ್ನೆಯ ಮೇಲೆ ಗಾಯ ಇರಲಿಲ್ಲ , ರಕ್ತ ಮಾತ್ರ ಹತ್ತಿತ್ತು. ನಾನು ಮೃತ ಶಾಂತಾಬಾಯಿಯ ಶವದ ಯಾವುದೇ ಭಾಗದಲ್ಲಿ ಗಾಯ ಆಗಿದೆಯೋ ಇಲ್ಲವೋ ಎಂಬುದನ್ನು ನೋಡಿಲ್ಲ.

15. "ನಾನು ನನ್ನ ತಂಗಿಯ ಎಡಗಲ್ಲದ ಮೇಲೆ ಗಾಯಗಳು ಸಹ ಆಗಿದ್ದವು" ಎಂದು ಹೇಳಿಕೆ ಕೊಟ್ಟಿರುವುದಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ-1(ಎ) ಎಂದು ಗುರುತಿಸಲಾಯಿತು.

16. ಪ್ರಾಸಾ-7 ಗೀತಾ ನನ್ನ ಮುಂದೆ ಆರೋಪಿ ಹಾಗೂ ಅವನ ಹೆಂಡತಿ ಒಬ್ಬ ಮೇಡಮನನ್ನು ಕರೆದುಕೊಂಡು ಅವಳ ತಾಯಿ ಹತ್ತಿರ ಮನೆ ಬಾಡಿಗೆಗಾಗಿ ಬಂದಿದ್ದರು ಎಂದು ಹೇಳಿರುವುದಿಲ್ಲ.

17. ನಾನು ಪೊಲಿಸರ ಮುಂದೆ "ನನ್ನ ತಂಗಿಯ ಮಗಳು ಗೀತಾ ಆರೋಪಿ ಹಾಗೂ ಅವನ ಹೆಂಡತಿ ನನ್ನ ತಂಗಿಯ ಮನೆಗೆ ಘಟನೆಯ ಒಂದು ವಾರದ ಹಿಂದೆ ಬಂದು ನಿಮ್ಮ ಅಟ್ಟದ ಮನೆಯನ್ನು ಆಫಿಸ ಮಾಡಿಕೊಳ್ಳುತ್ತೇವೆ ಬಾಡಿಗೆ ಕೊಡಿ ಎಂದು ಕೇಳಿದ್ದರು, ಅವರ ಜೊತೆ ಒಬ್ಬಳು ಮೆಡಮ್ ಬಂದಿದ್ದರು ಎಂದು ಹೇಳಿದಳು" ಎಂದು ಹೇಳಿರುವುದಿಲ್ಲ. ಸದರಿ ಹೇಳಿಕೆಯ ಬಾಗವನ್ನು ನಿಡಿ-2 ಎಂದು ಗುರುತಿಸಲಾಯಿತು.

18. ನಾನು ಘಟನೆಯಾದ ದಿನ ಆರೋಪಿಯ ಮನೆಗೆ ಹೋಗಿ ಅವನು ಮನೆಯಲ್ಲಿ ಇರುತ್ತಾನೋ? ಇಲ್ಲವೊ ಎಂದು ಪರಿಶೀಲನೆ ಮಾಡಿರುದಿಲ್ಲ.

19. ನಾನು ಪೋಲಿಸರ ಮುಂದೆ " ದಿಃ16.08.2019 ರಂದು ರಾತ್ರಿ 11.30 ರ ಸುಮಾರಿಗೆ ಅವಳ ಮನಗೆ ಬಂದು ಅವಳೊಂದಿಗೆ ಮಾತನಾಡಿಸುವ ನೆಪ ಮಾಡಿ ಅವಳ ಮೈಮೇಲಿನ ಆಬರಣಗಳನ್ನು ಕಿತ್ತುಕೊಳ್ಳಲು ಪ್ರಯತ್ನ ಮಾಡಿದ್ದು, ಅವಳು ಕೊಡದೇ ಇದ್ದಾಗ ಇಬ್ಬರು ಸೇರಿ ಅವಳ ಮನೆಯ ಮಂಚಕ್ಕೆ ಕೈಯನ್ನು ಕಟ್ಟಿ , ಕುತ್ತಿಗೆಗೆ ಮತ್ತು ಕಣ್ಣಿಗೆ ಸೀರೆಯಿಂದ ಬಿಗಿದು , ತಲೆದಿಂಬಿನಿಂದ ಉಸಿರುಗಟ್ಟಿಸಿ ಕೊಲೆ ಮಾಡಿದ್ದು, ಆಗ ದಿಃ17.08.2019 ಬೆಳಗಿನ ಜಾವ 3.00 ಗಂಟೆಯಾಗಿದ್ದು ನಂತರ ಅವಳ ಮೈ ಮೇಲೆ ಇದ್ದ ಬಳೆ ಮತ್ತು ಚೈನ ಸರವನ್ನು ಕಿತ್ತುಕೊಂಡು ಆರೋಪಿತರು ತಮ್ಮ ವಾಸದ ಮನೆಯಲ್ಲಿ ಇಟ್ಟು ನಂತರ ವಿಷಯ ಗೊತ್ತಾದರೆ ತಮ್ಮನ್ನು ಉಳಿಸುವುದಿಲ್ಲ ಎಂದು ತಿಳಿದು, ಆರೋಪಿ ತನ್ನ ಮಕ್ಕಳನ್ನು ಮೊದಲು ಊರಿಗೆ ಕಳುಹಿಸಿಕೊಟ್ಟು ನಂತರ ಅವರಿಬ್ಬರು ಸಹ ಮನೆಯಿಂದ ಹೊರಟು ಹುಬ್ಬಳ್ಳಿಯ ಉಣಕಲ್ ಕೆರೆಗೆ ಹೋಗಿ , ತಮ್ಮ ಮಕ್ಕಳನ್ನ ಕರೆಸಿಕೊಂಡು ಮೃತ ಶಾಂತಾಬಾಯಿಯನ್ನು ಕೊಲೆ ಮಾಡಿದ ವಿಷಯ ಹೇಳಿ ನಂತರ ವಿಷ ಕುಡಿದು ಸಾಯಲು ಪ್ರಯತ್ನಿಸಿದರು" ಎಂದು ಹೇಳಿರುವುದಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ-3 ಎಂದು ಗುರುತಿಸಲಾಯಿತು.

20. ಮೃತ ಶಾಂತಾಬಾಯಿ ಸಾಯುವ ಪೂರ್ವದಲ್ಲಿ ತಾನೇ ಅಡುಗೆ ಮಾಡುತ್ತಿದ್ದಳು. ಮೊದಲು ಕೆಲಸದವರು ಇದ್ದರು ನಂತರ ಇರಲಿಲ್ಲ ಎಂದು ಹೇಳುತ್ತಾರೆ. ಮೃತ ಶಾಂತಾಬಾಯಿ ಮನೆಯಲ್ಲಿ ಗ್ಯಾಸ ಸಿಲೆಂಡರ್ ಉಪಯೋಗಿಸುತ್ತಿರಬಹುದು, ನನಗೆ ಮಾಹಿತಿ ಇಲ್ಲ. ನಾನು ಘಟನೆಯ ದಿನ ಮೃತ ಶಾಂತಾಬಾಯಿ ಮನೆಗೆ ಹೋದಾಗ ಅವಳ ಮನೆಯಲ್ಲಿ ಗ್ಯಾಸ ಸಿಲೆಂಡರ್ ಇತ್ತೋ ಇಲ್ಲವೋ ನೋಡಿಲ್ಲ. ಸದರಿ ಮನೆಯಲ್ಲಿ ಗ್ಯಾಸ್ ಹರಡಿತ್ತೋ ಅಥವಾ ಗ್ಯಾಸ ವಾಸನೆ ಬರುತ್ತಿತ್ತೋ ಇಲ್ಲವೋ ನಾನು ಪರಿಶೀಲನೆ ಮಾಡಿ ನೋಡಿಲ್ಲ.

21. ನಾನು ಪೋಲಿಸರ ಮುಂದೆ ಮೃತ ಶಾಂತಾಬಾಯಿ ಮನೆಯಲ್ಲಿ ಗ್ಯಾಸ ಸೀಲೆಂಡರ್ ತೆರೆದಿತ್ತು ಹಾಗೂ ವಾಸನೆ ಬರುತ್ತಿತ್ತು ಎಂದು ಹೇಳಿಲ್ಲ. ಮೃತ ಶಾಂತಾಬಾಯಿ ನಿತ್ಯ ದೇವರ ಸ್ಮರಣೆ ಮಾಡುತ್ತಿದ್ದಳು ಹಾಗೂ ಸಂಪ್ರದಾಯಸ್ಥಳು ಇದ್ದಳು. ಸಂಪ್ರದಾಯಸ್ಥರ ಮನೆಯಲ್ಲಿ ಸಂಜೆ ಹೊತ್ತು ಹೊಸ್ತಿಲಿಗೆ ದೀಪ ಹಚ್ಚುತ್ತಾರೆ ಎಂದರೆ ಸರಿಯಲ್ಲ.

22. ನಾನು ಪೋಲಿಸರ ಮುಂದೆ ಮೃತ ಶಾಂತಾಬಾಯಿ ಹೊಸ್ತಿಲ ಹತ್ತಿರ ಹಿತ್ತಾಳೆಯ ದೀಪ ಇದ್ದು ಅದು ಆರಿತ್ತು ಹಾಗೂ ಅಲ್ಲಿ ಬೆಂಕಿ ಪಟ್ಟಿಣ ಇತ್ತು ಎಂದು ಹೇಳಿಕೆ ಕೊಟ್ಟಿರುವುದಿಲ್ಲ. ನಾನು ಪೋಲಿಸರನ್ನು ಯಾವತ್ತು ಬೇಟಿ ಮಾಡಿರುದಿಲ್ಲ.

23. ನಾನು ಈ ನ್ಯಾಯಾಲಯದ ಮುಂದೆ ನನ್ನ ಮುಖ್ಯ ವಿಚಾರಣೆಯಲ್ಲಿ ಗ್ಯಾಸ ವಾಸನೆ ಹರಡಿತ್ತು , ಗ್ಯಾಸ ಸೀಲೆಂಡರ್ ಪೈಪ್ ಬಿಚ್ಚಲಾಗಿತ್ತು ,ಹೊಸ್ತಿಲ ಮೇಲೆ ಹಚ್ಚಿದ ಹಿತ್ತಾಳೆ ದೀಪ ಆರಿತ್ತು , ಪಕ್ಕದಲ್ಲಿ ಬೆಂಕಿ ಪೊಟ್ಟಣ ಇತ್ತು , ಆರೋಪಿ ನನ್ನ ತಂಗಿಗೆ ಸಂಬಂದಿಸಿದ 6 ಬಳೆಗಳು ಹಾಗೂ ಬಂಗಾರದ ಲಾಕೇಟ ಸರ ತೆಗೆದುಕೊಂಡು ತಮ್ಮ ಮನೆಗೆ ಹೋಗಿ ಮನೆಯಲ್ಲಿಟ್ಟು , ಹುಬ್ಬಳ್ಳಿಯ ಉಣಕಲ ಕೆರೆಯ ಬಳಿ ಹೋದ ಎಂದು ಪೋಲಿಸರ ಹೇಳಿದ ರೀತಿಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಆ ರೀತಿ ನ್ಯಾಯಾಲಯದ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ.

24. ನನ್ನ ತಂಗಿಯ ಶವದ ಮೇಲೆ ಕಿತ್ತಳೆ ಬಣ್ಣದ ಸೀರೆ , ಕಪ್ಪು ಬಣ್ಣದ ರವಿಕೆ ಮತ್ತು ಕೆಂಪು ಬಣ್ಣದ ಲಂಗ ಮತ್ತು ಕಾಫಿ ಬಣ್ಣದ ಸ್ವೇಟರ್ ಇತ್ತು. ನನ್ನ ಸಮಕ್ಷಮ ಪೋಲಿಸರು ಸದರಿ ಬಟ್ಟೆಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ.

25. ನನ್ನ ತಂಗಿ ಧರಿಸುತ್ತಿದ್ದ ಬಂಗಾರದ ಆಭರಣಗಳು ಯಾವ ಮಾದರಿ ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ. ನಿಪಿ-12 ರಿಂದ 14 ರಲ್ಲಿ ತೋರಿಸಲಾದ ಬಂಗಾರದ ಬಳೆಗಳನ್ನು ಯಾರಾದರೂ ಮಾಡಿಸಬಹುದು ಎಂದರೆ ಸರಿ.

26. ಮುಮಾ-4 ರಿಂದ 16 ತರಹದ ವಸ್ತುಗಳು ಯಾರುಕಟ್ಟೆಯಲ್ಲಿ ಲಭ್ಯವಿರುತ್ತವೆ ಎಂದರೆ ಸರಿ. ನನ್ನ ಜೊತೆ ಈ ದಿನ ನ್ಯಾಯಾಲಯಕ್ಕೆ ಪ್ರಾಸಾ-6 ಕೃಷ್ಣ ಬಂದಿರುತ್ತಾರೆ ಎಂದರೆ ಸರಿ. ಆಸ್ತಿ ಸಂಬಂದವಾಗಿ ಮೃತ ಶಾಂತಾಬಾಯಿ ಹಾಗೂ ಅವರ ಗಂಡು ಮಕ್ಕಳ ಮದ್ಯೆ ಆಗಾಗ ಜಗಳವಾಗಿತ್ತಿತ್ತು ಎಂದರೆ ಸರಿಯಲ್ಲ. ಪ್ರಾಸಾ-9 ಮೃತ್ಯುಜಯ ಸದರಿ ವಿಷಯವಾಗಿ ಬಹಳಷ್ಟು ಸಲ ಪಂಚಾಯಿತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಸ್ತಿಗೆ ಸಂಬಂದಿಸಿದಂತೆ ಮೃತ ಶಾಂತಾಬಾಯಿ ಮಕ್ಕಳು ಹಾಗೂ ಅವಳ ಮದ್ಯೆ ಜಗಳಾಗಿ ಈ ಅಹಿತಕರ ಘಟನೆ ಆಗಿದೆ ಎಂದರೆ ಸರಿಯಲ್ಲ. ನನಗೆ ಬನವಾಸಿಯಿಂದ ಬಂದಾಗ ಆ ವಿಷಯ ಗೊತ್ತಾಗಿದ್ದು, ಆದ್ದರಿಂದಲೇ ಶಾಂತಾಬಾಯಿ ಮಕ್ಕಳು ಯಾರು ದೂರನ್ನು ಕೊಟ್ಟಿರಲಿಲ್ಲ, ಆ ಕಾರಣದಿಂದಾಗಿ ನನ್ನ ತಮ್ಮ ಪೋಲಿಸ ಠಾಣೆಯಲ್ಲಿ ದೂರನ್ನು ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ.

27. ನಮ್ಮ ತಂಗಿಯ ಮಕ್ಕಳನ್ನು ಉಳಿಸುವ ಉದ್ದೇಶದಿಂದ ಆರೋಪಿಯನ್ನು ಈ ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿಯ ಹೆಂಡತಿ ಸುಧಾಳಿಗೆ ತುಂಬಾ ಹೊಟ್ಟೆನೋವು ಬರುತ್ತಿತ್ತು ಎಂದರೆ ಗೊತ್ತಿಲ್ಲ. ಆ ಕಾರಣದಿಂದಾಗಿ ಅವಳ ವಿಷ ಸೇವಿಸಿದ್ದಳು ಎಂದರೆ ನನಗೆ ಗೊತ್ತಿಲ್ಲ. ಅವಳು ವಿಷ ತೆಗೆದುಕೊಂಡ ಕಾರಣ ಆರೋಪಿ ಅವಳ ಮೇಲೇ ತುಂಬಾ ಪ್ರೀತಿ ಇರುವುದರಿಂದ ತಾನು ವಿಷ ಸೇವಿಸಿದ ಎಂದರೆ ಗೊತ್ತಿಲ್ಲ.

28. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ನಾನು ನನ್ನ ತಮ್ಮನು ನೀಡಿದ ಸುಳ್ಳು ದೂರಿಗೆ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

(ಅಶ್ವಿನಿ ವಿಜಯ ಶಿರಿಯಣ್ಣನವರ)
ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.